# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

## ದಿನಾಂಕಃ 18.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಬಸವಯ್ಯ ಬಿನ್ ಲೇ. ಕೊಲ್ಲಾರಯ್ಯ |
| ವರ್ಷ | 37 ವರ್ಷ |
| ಕೆಲಸ | ವ್ಯವಸಾಯ |
| ವಾಸ್ತವ್ಯ | ಸಣಬನಹಳ್ಳಿ |
| | **ಸತ್ಯ ಪ್ರತಿಜ್ಞೆಯ ಮೇರೆಗೆ** |

## ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ ಸಿ ಎಸ್ ಎ ರವರಿಂದ

ನಾನು ಈ ದಾವೆಯಲ್ಲಿ 2 ನೇ ಪ್ರತಿವಾದಿ ಎಂದರೆ ಸರಿ. ವಾದಿ ನನಗೆ ಗೊತ್ತು ಎಂದರೆ ಸರಿ. ವಾದಿಯ ತಂದೆಯ ಹೆಸರು ಸಿದ್ದಪ್ಪ ಎಂದರೆ ಸರಿ. ದಾವಾಸ್ವತ್ತನ್ನು ವಾದಿಯ ತಂದೆ ಸಿದ್ದಪ್ಪ ರವರು ದೊಡ್ಡನರಸಯ್ಯ ಹಾಗೂ ಅವರ ಹೆಂಡತಿ ಲಕ್ಕಮ್ಮರವರಿಂದ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ನನಗೆ ಕನ್ನಡ ಭಾಷೆ ಓದಲು ಬರುವುದಿಲ್ಲ. ನಾನು ಓದು ಬರಹ ಕಲಿತಿಲ್ಲ, ಬರಿ ಸಹಿ ಮಾತ್ರ ಮಾಡುತ್ತೇನೆ. ದೊಡ್ಡನರಸಯ್ಯ ಹಾಗೂ ಲಕ್ಕಮ್ಮ ರವರನ್ನು ನಾನು ನೋಡಿರುತ್ತೇನೆ. ದಾವಾಸ್ವತ್ತು ಮೂಲತಃ ದೊಡ್ಡನರಸಯ್ಯ ಮತ್ತು ಲಕ್ಕಮ್ಮ ರವರು 1959 ರಲ್ಲಿ ಮಲ್ಲಯ್ಯನ ಮಗ ವೆಂಕಟಯ್ಯನಿಂದ ಖರೀದಿ ಮಾಡಿರುತ್ತಾರೆ. ಸದರಿ ದೊಡ್ಡನರಸಯ್ಯ ಹಾಗೂ ಅವರ ಹೆಂಡತಿ ಸ.ನಂ.39 ರಲ್ಲಿ ಒಟ್ಟು 3 ಎಕರೆ 36 ಗುಂಟೆ ಖರೀದಿ ಮಾಡಿದ್ದರು. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ದಲ್ಲಿ ಬರೆಸಿರುವ ವಿಚಾರಗಳನ್ನು ನಾನೇ ಖುದ್ದು ಹೇಳಿ ಬರೆಸಿದ್ದೇನೆ.

ದೊಡ್ಡನರಸಯ್ಯ ಹಾಗೂ ಲಕ್ಕಮ್ಮನಿಗೂ, ನಮಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಇತರೆ ಪ್ರತಿವಾದಿಗಳು ದೊಡ್ಡನರಸಯ್ಯ ಹಾಗೂ ಲಕ್ಕಮ್ಮನಿಗೆ ಸಂಬಂಧಿಕರು ಎಂದು ಹೇಳಲು ನಾನು ವಿಲ್ ಅನ್ನು ಹಾಜರುಪಡಿಸಿದ್ದೇನೆ. ದೊಡ್ಡನರಸಯ್ಯ ಹಾಗೂ ಲಕ್ಕಮ್ಮ ನಮ್ಮ ಹೆಸರಿಗೆ ಯಾವುದೇ ವಿಲ್ ಅನ್ನು ಬರೆದಿಲ್ಲ ಹಾಗೂ ನಾನು

ನ್ಯಾಯಾಲಯಕ್ಕೆ ಯಾವುದೇ ವಿಲ್ ಅನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಮಗೂ ದೊಡ್ಡನರಸಯ್ಯ ಹಾಗೂ ಲಕ್ಕಮ್ಮನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ಖರೀದಿ ಮಾಡಿದಾಗಿನಿಂದಲೂ ವಾದಿಯ ತಂದೆ ಸಿದ್ದಪ್ಪ ದಾವಾಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದರೂ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಖಾತೆ ಪಹಣಿ ಸಿದ್ದಪ್ಪನ ಹೆಸರಿಗೆ ಅಗಿತ್ತು ಎಂದರೆ ಸಾಕ್ಷಿಯು ಮೋಸ ಮಾಡಿ ಮಾಡಿಸಿಕೊಂಡಿರುತ್ತಾರೆ ಎನ್ನುತ್ತಾರೆ. ದೊಡ್ಡಮ್ಮ ಹಾಗೂ ಸಿದ್ದನರಸಯ್ಯ ಅವರ ಜೀವಿತ ಕಾಲದಲ್ಲಿ ಸಿದ್ದಪ್ಪನ ಹೆಸರಿಗೆ ಅಗಿದ್ದ ಖಾತೆ ಪಹಣಿಯನ್ನು ಪ್ರಶ್ನಿಸಿ ಪ್ರಕರಣ ದಾಖಲಸಿದ್ರಾ ಎಂದರೆ ಸಾಕ್ಷಿಯು ಇಲ್ಲಾ ಎನ್ನುತ್ತಾರೆ. ದೊಡ್ಡನರಸಯ್ಯ ಹಾಗೂ ಲಕ್ಕಮ್ಮನಿಗೆ ಸಿದ್ದಪ್ಪನಿಗೆ ದಾವಾಸ್ವತ್ತನ್ನು ಮಾರಾಟ ಮಾಡಿದ ವಿಷಯ ಹಾಗೂ ದಾವಾಸ್ವತ್ತಿನ ಸ್ವಾಧೀನವನ್ನು ಸಿದ್ದಪ್ಪನಿಗೆ ಕೊಟ್ಟಿರುವ ವಿಚಾರ ಗೊತ್ತಿದ್ದರಿಂದ ಅವರು ಸಿದ್ದಪ್ಪನ ಹೆಸರಿನಲ್ಲಿ ಆದ ಖಾತೆ ಪಹಣಿಯನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ಸಿದ್ದಪ್ಪ ಮೃತ ಪಟ್ಟ ನಂತರ ವಾದಿ ಪೌತಿ ವಾರಸು ಮೇಲೆ ದಾವಾಸ್ವತ್ತಿನ ಸ್ವಾಧೀನಾನುಭವದಲ್ಲಿ ಇದ್ದು ಅವರ ಹೆಸರಿಗೆ ಖಾತೆ ಪಹಣಿ ಅಗಿದೆ ಎಂದರೆ ಸರಿಯಲ್ಲ. ಎಂ ಅರ್ 10/1985-86 ರಂತೆ ದಾವಾಸ್ವತ್ತಿನ ಖಾತೆ ಪಹಣಿ ಪೌತಿ ವಾರಸು ಮೇಲೆ ವಾದಿಯ ಹೆಸರಿಗೆ ಅಗಿದೆ ಎಂದರೆ ಸಾಕ್ಷಿಯು ಅವರು ಸುಳ್ಳು ಹೇಳಿ ಮಾಡಿಸಿಕೊಂಡಿರುತ್ತಾರೆ ಎನ್ನುತ್ತಾರೆ. ದಾವಾ ಸ.ನಂ.39 ರಲ್ಲಿ 3 ಎಕರೆ 36 ಗುಂಟೆ ಪೈಕಿ ದಕ್ಷಿಣ ದಿಕ್ಕಿನಲ್ಲಿ 3 ಎಕರೆ 20 ಗುಂಟೆ ವಾದಿಯ ತಂದೆ ಸಿದ್ದಪ್ಪನಿಗೆ ಕ್ರಯ ಆಗಿದೆ ಎಂದರೆ ಸಾಕ್ಷಿಯು ಅವರು ಸುಳ್ಳು ಹೇಳಿ ಮಾಡಿಸಿಕೊಂಡಿರುತ್ತಾರೆ ಎನ್ನುತ್ತಾರೆ. ದಾವಾಸ್ವತ್ತಿನ ಈಗಿನ ಖಾತೆ ಪಹಣಿಯನ್ನು ನಾನು ನೋಡಿದ್ದೇನೆ. ನಿಪಿ.6 ರಂತೆ ದಾವಾಸ್ವತ್ತಿನ ಖಾತೆ ಪಹಣಿ ವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ ಸಾಕ್ಷಿ ಮುಂದುವರೆದು ವಾದಿ ಸುಳ್ಳು ಹೇಳಿ ಮಾಡಿಸಿಕೊಂಡಿರುತ್ತಾರೆ ಎನ್ನುತ್ತಾರೆ. ದಾವಾ ಸ.ನಂ.39 ರಲ್ಲಿ ಉಳಿದ 16 ಗುಂಟೆ ಜಮೀನು ಲಕ್ಕಮ್ಮ ಕೋಂ ದೊಡ್ಡನರಸಯ್ಯ ರವರ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ದೊಡ್ಡನರಸಯ್ಯ ಮತ್ತು ಲಕ್ಕಮ್ಮ ವಾದಿಗೆ ಹೆಸರಿಗೆ ಅಗಿರುವ ಎಂ ಅರ್ 10/1985-86 ಅನ್ನು ಪ್ರಶ್ನಿಸಿ ಎಲ್ಲೂ ಪ್ರಕರಣ ದಾಖಲಿಸಿಲ್ಲ ಎಂದರೆ ಸರಿ. ವಾದಿ ದಾವಾಸ್ವತ್ತಿಗೆ ಮಾಲೀಕರಾಗಿದ್ದು ಅದರ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ, ವಾದಿ ದಾವಾಸ್ವತ್ತಿನಲ್ಲಿ ತೆಂಗು, ಮಾವು, ಹುಣಸೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾವು ಬೆಳೆ ಬೆಳೆಯುತ್ತಿದ್ದೇವೆ ಎನ್ನುತ್ತಾರೆ. ನಾವು ದಾವಾಸ್ವತ್ತಿನಲ್ಲಿ ಅತಿ ಕ್ರಮ ಪ್ರವೇಶ ಮಾಡಿ ಗುಡಿಸಲು ಹಾಕಲು ಪ್ರಯತ್ನ ಪಟ್ಟಿದ್ದರಿಂದ ವಾದಿ ನಮ್ಮ ವಿರುದ್ದ ಪೋಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ ಎಂದರೆ ಸರಿ. ದಾವಾಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು

ಸ್ವಾಧೀನದಲ್ಲಿ ಇಲ್ಲದೇ ಇರುವುದರಿಂದ ನಾವು ವಾದಿಯ ಸ್ವಾಧೀನಕ್ಕೆ ತೊಂದರೆ ಕೊಟ್ಟಿದ್ದರಿಂದ ವಾದಿ ನಮ್ಮ ವಿರುದ್ಧ ಈ ದಾವೆ ಹಾಕಿದ್ದಾರೆ ಎಂದರೆ ಸರಿಯಲ್ಲ.

**(**ವ ುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು**)**

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ

Dw.1 present. Plaintiff counsel cross examined Dw.1 partly and prays time for further cross.

For further cross of Dw.1.

Call on.22.04.25

Pw1 present he is cross examined by defendant counsel fully .

Defendant counsel prays time for cross of Pw2.

Call on.25.11.2024.